**ಸಾಕ್ಷಿಯನ್ನು ದಿನಾಂಕಃ06.03.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್ ಎಂ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ.

| **ಕ್ರಮ ಸಂಖ್ಯೆ :** | **ದಾಖಲೆಗಳು** |
|---|---|
| 1 | : ವಾದಿ ನನಗೆ ಬರೆದುಕೊಟ್ಟಿರುವ ಅಧಿಕಾರ ಪತ್ರ |
| 2 | : ಪ್ರತಿವಾದಿಗೆ ಕಳುಹಿಸಿದ ನೋಟೀಸ್ ನ ಕಛೇರಿ ಪ್ರತಿ |
| 3 | : ಅಂಚೆ ರಶೀದಿಗಳು -2 |
| 4 | : ಜಾರಿಯಾಗದೇ ವಾಪಾಸ್ ಬಂದ ಅಂಚೆ ಲಕೋಟೆಗಳು -2 |
| 5 | : ಫೋಟೋಗಳು -2 ಮತ್ತು ಅವುಗಳ ಸಿ ಡಿ |

**ಮೇಲ್ಕಂಡ ದಾಖಲೆಗಳನ್ನು ನಿಶಾನೆ ಪಿಃ 1 ರಿಂದ 9 ಎಂದು ಗುರುತಿಸಲಾಯಿತು.**

ಜಾರಿಯಾಗದೇ ಹಿಂತಿರುಗಿದ ಅಂಚೆ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ಹೊಡೆದು ನೋಡಲಾಗಿ ಅವುಗಳಲ್ಲಿ ಇದ್ದ ನೋಟೀಸ್ ನ ಪ್ರತಿ ಕಛೇರಿ ಪ್ರತಿಗೆ ತಾಳೆಯಾಗಿದ್ದರಿಂದ ಸದರಿ ನೋಟೀಸ್ ನ ಪ್ರತಿಗಳನ್ನು ನಿಪಿಃ 5(ಎ) ಮತ್ತು 6(ಎ) ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.